# ಕ್ರಿಕೆಟ್ ಮೋದಿ

ಕ್ರಿಕೆಟ್ ಮತ್ತು ರಾಜಕೀಯದ ನಂಟು ಇಂದು ನಿನ್ನೆಯದಲ್ಲ. ಈಗ ಅದನ್ನು ಬೇರ್ಪಡಿಸಲು ಯತ್ನಿಸಿದರೆ ಸಾಧ್ಯವೂ ಆಗಲಿಕ್ಕಿಲ್ಲ. ರಾಜಕೀಯದಲ್ಲಿ ಸಹಜವೇ ಎನ್ನುವಂತಿರುವ ಭ್ರಷ್ಟಾಚಾರ ಕ್ರಿಕೆಟ್ ಮೈದಾನವನ್ನೂ ವ್ಯಾಪಿಸಿ ಬಹಳ ವರ್ಷಗಳಾದವು. ಈಗ ಸುದ್ದಿಯಲ್ಲಿರುವ ಲಲಿತ್ ಮೋದಿ, ಬಹುತೇಕ ಎಲ್ಲ ರಾಜಕೀಯ ನಾಯಕರ ಇಷ್ಟಾರ್ಥಗಳನ್ನೂ ಪೂರೈಸಿದವರು. ಕ್ರಿಕೆಟ್ ಆಡಳಿತದಲ್ಲಿ ಮೂಗು ತೂರಿಸಲು ರಾಜಕಾರಣಿಗಳನ್ನು ಬಳಸಿಕೊಂಡ ಲಲಿತ್ ಮೋದಿ, ತನ್ನ ಭ್ರಷ್ಟತೆಯ ರಾಡಿಯಲ್ಲಿ ಅವರನ್ನೂ ಮುಳುಗೇಳಿಸಿದ್ದಾರೆ. ಕ್ರಿಕೆಟ್, ರಾಜಕೀಯ ಮಾತ್ರವಲ್ಲ, ಇನ್ಯಾವುದೇ ಕ್ಷೇತ್ರದಲ್ಲೂ ಹಣವೇ ಮುಖ್ಯ ಎಂದಾದಾಗ, ಭ್ರಷ್ಟತೆ ಸಹಜವೇ ಆಗುತ್ತದೆ ಎನ್ನುವುದಕ್ಕೆ ಲಲಿತ್‌ಮೋದಿ ಸಾಕ್ಷಿ. ಈ ಮೋದಿ ಕ್ರಿಕೆಟ್‌ಗೆ ಅಮರಿಕೊಂಡದ್ದೂ ಆಕಸ್ಮಿಕವೇ. ಒಂದು ಕಾಲದಲ್ಲಿ ಈತನ ತಾತ ಗುಜರ್‌ಮಲ್ ಮೋದಿ ಸ್ಥಾಪಿಸಿದ ಉದ್ಯಮ ಒಕ್ಕೂಟ ಮತ್ತು ಮೋದಿನಗರ್ ಟೌನ್‌ಷಿಪ್, ಸಾವಿರಾರು ಜನರಿಗೆ ಉದ್ಯೋಗ ಒದಗಿಸಿದೆ. ಅಪ್ಪ ಕೆ.ಕೆ.ಮೋದಿ ಆ ಉದ್ಯಮ ಸಾಮ್ರಾಜ್ಯವನ್ನು ಇನ್ನಷ್ಟು ವಿಸ್ತರಿಸಿದರು. ಆದರೆ ಈಗ ಮೊಮ್ಮಗ ಲಲಿತ್ ಮೋದಿ ನಡೆಸುತ್ತಿರುವ ವಹಿವಾಟುಗಳು ಈ ಉದ್ಯಮ ಗುಂಪಿಗೆ ಯಾವ ಒಳ್ಳೆಯ ಹೆಸರನ್ನೂ ತಂದಿಲ್ಲ ಎನ್ನುವುದು ವಿಪರ್ಯಾಸ.

ಲಲಿತ್ ಬಾಲ್ಯದ ವಿದ್ಯಾಭ್ಯಾಸ ನಡೆಸಿದ್ದು ಶಿಮ್ಲಾದ ಬಿಷಪ್ ಕಾಟನ್‌ನಲ್ಲಿ. ಅಲ್ಲಿ ಅಪಹರಣದ ಭೀತಿ ಎದುರಾದದ್ದರಿಂದ ಕೆಕೆ ಮೋದಿ ಮಗನನ್ನು ನೈನಿತಾಲ್‌ನ ಸೈಂಟ್ ಜೋಸೆಫ್ಸ್‌ಗೆ ಸೇರಿಸಿದರು. ಸಿನಿಮಾ ನೋಡಲು ತರಗತಿಗೆ ಬಂಕ್ ಮಾಡಿದ ಕಾರಣಕ್ಕಾಗಿ ಆ ಶಾಲೆಯಿಂದ ಲಲಿತ್‌ನನ್ನು ಉಚ್ಚಾಟಿಸಲಾಯಿತು! ಅಲ್ಲಿಂದಾಚೆಗೆ ವಿದ್ಯಾಭ್ಯಾಸ ನಡೆದದ್ದು ವಿದೇಶಗಳಲ್ಲಿ. 1983–86ರ ಅವಧಿಯಲ್ಲಿ ಲಲಿತ್ ಅಮೆರಿಕದಲ್ಲಿ ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ಮತ್ತು ಬಿಸಿನೆಸ್ ಅಡ್ಮಿನಿಸ್ಟ್ರೇಶನ್ ಕಲಿತಿದ್ದಾರೆ. ನ್ಯೂಯಾರ್ಕ್‌ನಲ್ಲಿ ಎರಡು ವರ್ಷ ಪೇಸ್ ಯೂನಿವರ್ಸಿಟಿಯಲ್ಲಿ ಹಾಗೂ ನಾರ್ತ್ ಕೆರೊಲಿನಾದಲ್ಲಿ ಒಂದು ವರ್ಷ ಡ್ಯೂಕ್ ಯೂನಿವರ್ಸಿಟಿಯಲ್ಲೂ ಕಲಿತಿದ್ದಾರೆ. ಆದರೆ ಯಾವ ಯೂನಿವರ್ಸಿಟಿಯಿಂದ ಯಾವ ಪದವಿಯನ್ನೂ ಪಡೆಯಲಿಲ್ಲ!

1985ರಲ್ಲಿ ವಿದ್ಯಾರ್ಥಿ ಆಗಿದ್ದಾಗಲೇ ಕೊಕೇನ್ ಹಗರಣವೂ ಈತನನ್ನು ಸುತ್ತಿಕೊಂಡಿತು. ಲಲಿತ್ ಮತ್ತು ಮೂವರು ಗೆಳೆಯರು 10 ಸಾವಿರ ಡಾಲರ್ ಇಟ್ಟುಕೊಂಡು ಹೋಟೆಲ್ ಒಂದರಲ್ಲಿ ಮಾದಕ ದ್ರವ್ಯ ಕೊಕೇನ್ ಖರೀದಿಸಲು ಒಬ್ಬನನ್ನು ಭೇಟಿ ಮಾಡಿದರು. ಆತ ಗನ್ ತೋರಿಸಿ ಇವರಲ್ಲಿದ್ದ ಹಣವನ್ನು ದೋಚಿದ. ಇದಕ್ಕೆ ಇನ್ನೊಬ್ಬ ವಿದ್ಯಾರ್ಥಿ ಕಾರಣ ಎಂದು ಅನುಮಾನಿಸಿ ಲಲಿತ್ ಮತ್ತು ಗೆಳೆಯರು ಆತನನ್ನು ಥಳಿಸಿದರು. ಪೊಲೀಸರು ಲಲಿತ್‌ನನ್ನು ಬಂಧಿಸಿ ಜೈಲಿಗಟ್ಟಿದರು. ನಾರ್ಥ್ ಕೆರೊಲಿನಾ ಕೋರ್ಟ್‌ನಲ್ಲಿ ಲಲಿತ್ ತಪ್ಪೊಪ್ಪಿಕೊಂಡಾಗ, ಎರಡು ವರ್ಷದ ಜೈಲುಶಿಕ್ಷೆ ಮಾಫಿ ಮಾಡಿ, ಐದು ವರ್ಷದ ಪ್ರೊಬೇಷನರಿ ಶಿಕ್ಷೆ ಮತ್ತು 100 ಗಂಟೆಗಳ ಸಮುದಾಯ ಸೇವೆಯ ಶಿಕ್ಷೆ ನೀಡಲಾಯಿತು. ಅನಾರೋಗ್ಯದ ಕಾರಣ ನೀಡಿ ಭಾರತಕ್ಕೆ ವಾಪಸಾಗಲು ಮೋದಿ ಅರ್ಜಿ ಹಾಕಿದಾಗ ಕೋರ್ಟ್ ಭಾರತದಲ್ಲೂ 200 ಗಂಟೆಗಳ ಸಮುದಾಯ ಸೇವೆ ಮಾಡಲು ಸೂಚಿಸಿ ಒಪ್ಪಿಗೆ ನೀಡಿತು. ಹಾಗೆ ಲಲಿತ್ ಭಾರತಕ್ಕೆ ಬಂದಿಳಿದದ್ದು 1986ರಲ್ಲಿ.

ದೆಹಲಿಗೆ ಬಂದ ಲಲಿತ್ ಕುಟುಂಬದ ಉದ್ಯಮ ನೋಡಿಕೊಂಡರು. 1987ರಿಂದ 91ರವರೆಗೆ ಐಟಿಸಿ ಅಧ್ಯಕ್ಷತೆ, 89ರಲ್ಲಿ ಗಾಡ್‌ಫ್ರಿ ಫಿಲಿಪ್ಸ್ ಇಂಡಿಯಾ ನಾನ್ ಎಕ್ಸಿಕ್ಯೂಟಿವ್ ಡೈರೆಕ್ಟರ್, ಬಳಿಕ 92ರಲ್ಲಿ ಅದೇ ಕಂಪೆನಿಯ ಎಕ್ಸಿಕ್ಯೂಟಿವ್ ಡೈರೆಕ್ಟರ್– ಹೀಗೆ ಅಧಿಕಾರ ನಡೆಯಿತು. 93ರಲ್ಲಿ ಫ್ಯಾಮಿಲಿ ಟ್ರಸ್ಟ್‌ನ ಹಣ ಬಳಸಿ ‘ಮೋದಿ ಎಂಟರ್‌ಟೈನ್‌ಮೆಂಟ್ ನೆಟ್‌ವರ್ಕ್ಸ್’ (ಎಂಇಎನ್) ಆರಂಭಿಸಿದ ಲಲಿತ್, ವಾಲ್ಟ್ ಡಿಸ್ನಿ ಜತೆ ಒಪ್ಪಂದ ಮಾಡಿಕೊಂಡು ಅದರ ಕೆಲವು ಕಾರ್ಯಕ್ರಮಗಳನ್ನು ಭಾರತದಲ್ಲಿ ಪ್ರಸಾರ ಮಾಡತೊಡಗಿದರು. 94ರಲ್ಲಿ ಇಎಸ್‌ಪಿಎನ್ ಜತೆ 10 ವರ್ಷಗಳ ಒಪ್ಪಂದ ಮಾಡಿಕೊಂಡು ಭಾರತದಲ್ಲಿ ಇಎಸ್‌ಪಿಎನ್‌ನ ವಿತರಕರಾದರು. ಫ್ಯಾಶನ್ ಟಿವಿ ಜತೆ ಒಪ್ಪಂದ ಏರ್ಪಟ್ಟಿತು. ಆದರೆ ಕೆಲವೇ ವರ್ಷಗಳಲ್ಲಿ, ‘ಆದಾಯದ ವಿವರಗಳನ್ನು ಸರಿಯಾಗಿ ನೀಡಿಲ್ಲ’ ಎಂದು ಎರಡೂ ಕಂಪೆನಿಗಳು ಮೋದಿ ಜತೆಗಿನ ಒಪ್ಪಂದ ರದ್ದು ಮಾಡಿಕೊಂಡವು. ಅಷ್ಟರಲ್ಲಾಗಲೇ ಲಲಿತ್ ಮೋದಿ ಕ್ರಿಕೆಟ್ ಉದ್ಯಮದ ಅಗಾಧ ಸಾಧ್ಯತೆಗಳನ್ನು ಕಂಡುಕೊಂಡಾಗಿತ್ತು.



ಅಲ್ಲಿಂದೀಚೆಗಿನದ್ದು ಹೊಸ ಇತಿಹಾಸ. ಅಮೆರಿಕನ್ ಸ್ಪೋರ್ಟ್ಸ್ ಲೀಗ್ ಮಾದರಿಯಲ್ಲಿ 50 ಓವರ್‌ಗಳ ಕ್ರಿಕೆಟ್ ಟೂರ್ನಿಯ ಪ್ರಸ್ತಾಪವೊಂದನ್ನು ಲಲಿತ್ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯ ಮುಂದಿಟ್ಟರು. ಬಿಸಿಸಿಐ ಒಪ್ಪಲಿಲ್ಲ. ಲಲಿತ್ ಹಿಮಾಚಲಪ್ರದೇಶ ಕ್ರಿಕೆಟ್ ಅಸೋಸಿಯೇಶನ್ ಸದಸ್ಯರಾಗಿ ಬಿಸಿಸಿಐ ಪ್ರವೇಶ ಪಡೆದರು. 2004ರಲ್ಲಿ ಪಂಜಾಬ್ ಕ್ರಿಕೆಟ್ ಅಸೋಸಿಯೇಶನ್ ಅಧ್ಯಕ್ಷರಾದರು. ವಸುಂಧರಾರಾಜೇ ಅವರು ರಾಜಸ್ತಾನದ ಮುಖ್ಯಮಂತ್ರಿಯಾದ ಬಳಿಕ, ರಾಜಸ್ತಾನ ಕ್ರಿಕೆಟ್ ಅಸೋಸಿಯೇಶನ್ ಅಧ್ಯಕ್ಷರಾಗಿ ಬಿಸಿಸಿಐ ಉಪಾಧ್ಯಕ್ಷರೂ ಆದರು. ಐಪಿಎಲ್ ಚೇರ್‌ಮನ್ ಆಗಿ, ಬೆಟಿಂಗ್ ಹಗರಣಗಳಾಗಿ ಅದರ ರಾಡಿ ವಿಶ್ವಾದ್ಯಂತ ಹಬ್ಬಿತು. ಐಪಿಎಲ್ ನಲ್ಲಿ ವಿದೇಶಿ ಹಣದ ಅಪರಾ ತಪರಾ ಆಗಿದೆ ಎಂದು ಜಾರಿ ನಿರ್ದೇಶನಾಲಯ ಕೇಸ್‌ಗಳನ್ನು ಜಡಿದದ್ದೇ, ಲಲಿತ್ ಮೋದಿ ಮತ್ತೆ ವಿದೇಶ ಸೇರಿಕೊಂಡುಬಿಟ್ಟಿದ್ದಾರೆ. ಇಲ್ಲಿ ರಾಜಕೀಯ ಪಕ್ಷಗಳು ಅವರನ್ನು ಬಂಧಿಸಿ ಎಂದು ಕೂಗಾಡುತ್ತಿದ್ದರೆ, ಮೋದಿ ಇಂಗ್ಲೆಂಡ್ ಬಳಿಯ ದ್ವೀಪವೊಂದರಲ್ಲಿ ರೆಸ್ಟ್ ತೆಗೆದುಕೊಳ್ಳುತ್ತಿದ್ದಾರೆ! ಬೆಕ್ಕಿಗೆ ಕಟ್ಟಲು ಗಂಟೆಯೇ ಇಲ್ಲದ ಪರಿಸ್ಥಿತಿ! ■

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65